## ನಿಮ್ಮೊಡನೆ

# ಗಾಯಾಳುಗಳ ಪ್ರಾಣ ಉಳಿಸಿ

ಅಪಘಾತವಾದಾಗ ಗಾಯಾಳುಗಳಿಗೆ ನೆರವಾಗುವುದು ಬಿಟ್ಟು ಫೋಟೋ ಹಿಡಿಯುವ, ವೀಡಿಯೊ ಮಾಡುವ ಅಮಾನವೀಯತೆ ಏಕೆ ಉಂಟಾಗಿದೆ? ನೆರವೀಯುವವರಿಗೆ ಕಾನೂನಿನ ಸ್ಪಷ್ಟ ರಕ್ಷಣೆಯೂ ಇರುವಾಗ, ಗಾಯಾಳುಗಳ ಪ್ರಾಣರಕ್ಷಣೆಗೆ ಜನರು ಏಕೆ ಮುಂದಾಗುತ್ತಿಲ್ಲ?


ವಾಹನಗಳ ಸಂಖ್ಯೆ ವಿಪರೀತ ಏರಿದೆ. ಹಾಗೆಯೇ ವಾಹನ ಚಲಾಯಿಸುವವರ ಏಕಾಗ್ರತೆಗೆ ಭಂಗ ತರುವ ಸಂಗತಿಗಳೂ ಹೆಚ್ಚಾಗಿವೆ. ಹೀಗೆ ಭಂಗ ತರುವುದು ಕೆಲವು ಸ್ವಯಂಕೃತ ಸಂಗತಿಗಳು; ಇನ್ನು ಕೆಲವು ಚಾಲಕನ ಕೈಮೀರಿದವು. ಹೀಗಾಗಿ ರಸ್ತೆ ಅಪಘಾತಗಳು ಸಾಮಾನ್ಯ ಎನ್ನುವಂತಾಗಿದೆ. ರಸ್ತೆಯಲ್ಲಿ ಒಂದು ಅಪಘಾತವಾಗಿ ರಕ್ತ ಚೆಲ್ಲಿದ ದೃಶ್ಯವನ್ನು ನೋಡುವಾಗ ಇನ್ನೊಬ್ಬನ ಮೈ 'ಜುಂ' ಎನ್ನುತ್ತದೆ. ಏಕೆಂದರೆ 'ನಮ್ಮಂತಹದ್ದೇ ಜೀವ ಅವನದ್ದು' ಎನ್ನುವ ಭಾವ ಎಲ್ಲರೊಳಗೂ ಇದ್ದೇ ಇರುತ್ತದೆ. ಹಿಂದೆಲ್ಲ ಒಂದು ಅಪಘಾತವಾದರೆ ಅದನ್ನು ನೋಡಿದ ಜನ ತಕ್ಷಣ ಓಡೋಡಿ ಬಂದು ಉಪಚರಿಸಿ ಆ್ಯಂಬುಲೆನ್ಸ್‌ಗೆ ಕರೆ ಮಾಡಿ, ಆಸ್ಪತ್ರೆಗೆ ಸೇರಿಸುತ್ತಿದ್ದರು. ಇತ್ತೀಚೆಗೆ ಜನರಲ್ಲಿ ಪರೋಪಕಾರದ ಪ್ರವೃತ್ತಿ ಕಡಿಮೆಯಾಗಿದೆಯೆ ಅಥವಾ ಸ್ವಂತದ ಹಿತಾಸಕ್ತಿಗಳಷ್ಟೇ ಸಾಕು ಎನ್ನುವ ಮನೋಭಾವ ಬೆಳೆದಿದೆಯೆ.. ಎನ್ನುವುದು ಗೊತ್ತಾಗುತ್ತಿಲ್ಲ. ಇತ್ತೀಚೆಗೆ ನಡೆದ ಎರಡು ಅಪಘಾತಗಳಲ್ಲಿ ಸ್ಥಳದಲ್ಲಿದ್ದ ಜನರು ನಡೆದುಕೊಂಡ ರೀತಿಯನ್ನು ಗಮನಿಸಿದರೆ ಈ ಪ್ರಶ್ನೆಗಳು ಏಳುವುದು ಸಹಜವೇ.

ಮೈಸೂರಿನ ಹೊರವಲಯದಲ್ಲಿ ಇನ್ಸ್‌ಪೆಕ್ಟರ್ ಮತ್ತು ಪೊಲೀಸ್ ಸಿಬ್ಬಂದಿಯೊಬ್ಬರು ಪ್ರಯಾಣಿಸುತ್ತಿದ್ದ ಜೀಪ್ ಅಪಘಾತಕ್ಕೆ ಒಳಗಾಗಿ ಆ ಇನ್ಸ್‌ಪೆಕ್ಟರ್ ಅರ್ಧ ಗಂಟೆಗೂ ಹೆಚ್ಚು ಕಾಲ ನೆರವಿಗಾಗಿ ರಸ್ತೆಯಲ್ಲೇ ಅಂಗಲಾಚಿ ಬಳಿಕ ಪ್ರಾಣಬಿಟ್ಟ ಪ್ರಕರಣ ಮೊದಲನೆಯದ್ದು. ಕೊಪ್ಪಳದಲ್ಲಿ ಸೈಕಲ್ ಸವಾರನೊಬ್ಬನ ಮೇಲೆ ಬಸ್ ಹರಿದು ಆತ ಜೀವನ್ಮರಣದ ನಡುವೆ ಹೊಯ್ದಾಡುತ್ತಿದ್ದಾಗ ಯಾರೂ ನೆರವಿಗೆ ಬರದೆ ಆತ ಅಸುನೀಗಿದ್ದು ಇನ್ನೊಂದು ಪ್ರಕರಣ. ಎರಡೂ ಪ್ರಕರಣದಲ್ಲಿ ದಾರಿಹೋಕರು ನೆರವು ನೀಡಿ ಇಬ್ಬರ ಪ್ರಾಣಗಳನ್ನೂ ಉಳಿಸುವ ಅವಕಾಶವಿತ್ತು. ಆದರೆ ಅದಾಗಲಿಲ್ಲ. ಕೊಪ್ಪಳದ ಪ್ರಕರಣದಲ್ಲಿ ಜನರು ನೆರವಿಗೆ ಬರಲಿಲ್ಲ ಮಾತ್ರವಲ್ಲ, ಮೊಬೈಲ್‌ನಲ್ಲಿ ಫೋಟೊ ಮತ್ತು ವೀಡಿಯೊ ಮಾಡುತ್ತಿದ್ದರಂತೆ.

ನಮ್ಮ ಜನರಿಗೆ ಏನಾಗಿದೆ? ಇಷ್ಟೊಂದು ಅಮಾನವೀಯತೆಯಿಂದ ಏಕೆ ವರ್ತಿಸುತ್ತಿದ್ದಾರೆ? 'ಅಪಘಾತಕ್ಕೆ ಈಡಾದವರನ್ನು ಆಸ್ಪತ್ರೆಗೆ ಕರೆದೊಯ್ದರೆ ಆ ಬಳಿಕ ಪೊಲೀಸ್ ಠಾಣೆ, ಕೋರ್ಟು– ಕಚೇರಿ ಎಂದು ವೃಥಾ ಅಲೆದಾಡುವುದಾಗುತ್ತದೆ. ನಮಗ್ಯಾಕೆ ಬೇಕು ಈ ಉಸಾಬರಿ..' ಎನ್ನುವುದು ಬಹಳಷ್ಟು ಮಂದಿ ಹೇಳುವ ಮಾತು. ಜನರ ಇಂತಹ ಧೋರಣೆಯಿಂದಾಗಿ ನೂರಾರು ಜೀವಗಳು ಸಕಾಲಕ್ಕೆ ಸೂಕ್ತ ಚಿಕಿತ್ಸೆ ದೊರಕದೆ ಹರಣಗೊಂಡಿವೆ. ಇದನ್ನು ಮನಗಂಡೇ ಸುಪ್ರೀಂಕೋರ್ಟ್ ಈಗಾಗಲೆ ಕೇಂದ್ರ ಸರಕಾರಕ್ಕೆ ಹಲವು ಸೂಚನೆಗಳನ್ನು ನೀಡಿವೆ. 'ಅಪಘಾತದ ಸ್ಥಳದಿಂದ ಗಾಯಾಳುವಾದ ವ್ಯಕ್ತಿಯನ್ನು ಯಾರೇ ಆಸ್ಪತ್ರೆಗೆ ಕರೆದುಕೊಂಡು ಬಂದರೂ, ಆಸ್ಪತ್ರೆಯವರಿಗೆ ಅಥವಾ ಪೊಲೀಸರಿಗೆ ಕರೆದುಕೊಂಡು ಬಂದ ವ್ಯಕ್ತಿಗಳ ಹೆಸರು, ವಿಳಾಸ, ಗುರುತುಪತ್ರಗಳನ್ನು ನೀಡಬೇಕಿಲ್ಲ. ಹೀಗೆ ನೆರವಾಗುವವರಿಗೆ ಯಾವುದೇ ರೀತಿಯಲ್ಲೂ ಕಾನೂನು ಕಿರುಕುಳ ನೀಡಬಾರದು. ಆಸ್ಪತ್ರೆಯಲ್ಲಿ ವೈದ್ಯರೂ ಚಿಕಿತ್ಸೆಗೆ ಪೊಲೀಸರು ಬರುವವರೆಗೆ ಕಾಯಬೇಕಿಲ್ಲ, ತಕ್ಷಣ ಚಿಕಿತ್ಸೆ ಒದಗಿಸಬೇಕು' ಎಂದು ಸುಪ್ರೀಂಕೋರ್ಟ್ ಕೇಂದ್ರ ಸರಕಾರಕ್ಕೆ ಸೂಚನೆ ನೀಡಿತ್ತು. ಕೇಂದ್ರ ಸರಕಾರವು ಈ ಸೂಚನೆಗಳನ್ನು ರಾಜ್ಯ ಸರಕಾರಗಳಿಗೆ ರವಾನಿಸಿ, ಈ ನಿಟ್ಟಿನಲ್ಲಿ ಸೂಕ್ತ ಕಾಯ್ದೆಗಳನ್ನು ಜಾರಿಗೆ ತರುವಂತೆ ಸೂಚಿಸಿತ್ತು. ಇದಕ್ಕೆ ಅನುಗುಣವಾಗಿ ರಾಜ್ಯದಲ್ಲಿ ಈಗಾಗಲೆ ಮಸೂದೆ ಮಂಡನೆಯಾಗಿ ಕಾನೂನು ರಚನೆಯಾಗಿದೆ. ರಸ್ತೆ ಅಪಘಾತದ ಗಾಯಾಳುಗಳಿಗೆ ನೆರವಾಗುವ ಜನರಿಗೆ ಎಲ್ಲ ರೀತಿಯ ರಕ್ಷಣೆಯೂ ಕಾನೂನುಬದ್ಧವಾಗಿಯೇ ದೊರಕುತ್ತಿದೆ. ಅಪಘಾತಗಳನ್ನು ನೋಡಿದವರು, ಗಾಯಾಳುಗಳನ್ನು ಆಸ್ಪತ್ರೆಗೆ ಸೇರಿಸಿದವರು ಸಾಕ್ಷಿ ಹೇಳಲು ಠಾಣೆಗಾಗಲೀ, ಕೋರ್ಟಿಗಾಗಲೀ ತೆರಳಬೇಕಿಲ್ಲ. ಅವರನ್ನು ಅದಕ್ಕಾಗಿ ಪೊಲೀಸರು ಬಲವಂತ ಮಾಡುವಂತೆಯೂ ಇಲ್ಲ. ಇಷ್ಟ ಇದ್ದವರಷ್ಟೇ ಹೋಗಬಹುದು.

ರಾಜ್ಯ ಸರಕಾರ ಇನ್ನೂ ಒಂದು ಅತ್ಯುತ್ತಮ ಕಾನೂನನ್ನು ಮಾಡಿದೆ. 'ಮುಖ್ಯಮಂತ್ರಿ ಸಾಂತ್ವನ ಹರೀಶ್ ಯೋಜನೆ'ಯನ್ನು ರೂಪಿಸಿದ್ದು, ಅದರನ್ವಯ ಅಪಘಾತದ ಗಾಯಾಳುಗಳಿಗೆ ಮೊದಲ 48 ಗಂಟೆಗಳಲ್ಲಿ ಸಮೀಪದ ಸರಕಾರಿ ಅಥವಾ ಖಾಸಗಿ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸೆ ನೀಡಲಾಗುತ್ತದೆ. ಯಾವುದೇ ಅಪಘಾತದಲ್ಲಿ ಮೊದಲ 48 ಗಂಟೆಗಳಲ್ಲಿ ದೊರಕುವ ಚಿಕಿತ್ಸೆ ಪ್ರಾಣ ಉಳಿಸುವಲ್ಲಿ ಅತ್ಯಂತ ಮಹತ್ವದ್ದು. ಗ್ರಾಮೀಣ ಪ್ರದೇಶಗಳಲ್ಲಿ ಈ ಯೋಜನೆಯ ಅರಿವು ಹೆಚ್ಚಿನವರಿಗೆ ಇನ್ನೂ ಇದ್ದಂತಿಲ್ಲ. ಸರಕಾರದ ಈ ಯೋಜನೆಯ ಬಗ್ಗೆ ಮತ್ತು ಗಾಯಾಳುಗಳ ಚಿಕಿತ್ಸೆಗೆ ನೆರವಾದವರ ರಕ್ಷಣೆಯ ಕಾನೂನಿನ ಬಗ್ಗೆ ಇಲಾಖೆಗಳು ವ್ಯಾಪಕ ಪ್ರಚಾರ ಕೈಗೊಳ್ಳಬೇಕು.

■ **ಬಿ.ಎಂ.ಹನೀಫ್**



ಈಶ್ವರ